ಅಭಿವೃದ್ದಿಗಾಗಿ ಉಪಯೋಗಿಸಲಾಗುವುದು.

ವಿಷಯ:- ಸ್ಟಾಫ್ ನರ್ಸ್ ಹುದ್ದೆಗಳಿಗೆ ವಯೋಮಿತಿ ಮೀರಿದ ನರ್ಸ್‌ಗಳನ್ನು ಕೈಬಿಟ್ಟಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 154 (409)

ಶ್ರೀ ಯು.ಆರ್.ಸಭಾಪತಿ (ಉಡುಪಿ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸ್ಟಾಫ್ ನರ್ಸ್ ಹುದ್ದೆ ಆಯ್ಕೆ ನಡೆದಿರುವುದು ನಿಜವೆ?

ಆ) ನಿಜವಾದಲ್ಲಿ, ಸರಕಾರವೇ ತರಬೇತಿ ಕೊಟ್ಟು ವಯೋಮಿತಿ ಮೀರಿದ ನರ್ಸ್‌ಗಳ ಆಯ್ಕೆಯನ್ನು ಕೈಬಿಡಲಾಗಿದೆಯೇ?

ಇ) ಹಾಗೆ ಕೈ ಬಿಟ್ಟಿದ್ದಲ್ಲಿ ವಿದ್ಯಾ ಇಲಾಖೆಯಲ್ಲಿ ವಯೋಮಿತಿ ಮೀರಿದವರಿಗೆ ಮೀಸಲು ಇಟ್ಟಹಾಗೆ ಇಲ್ಲಿಯೂ ಸಹ ಸ್ವಲ್ಪ ಪ್ರಮಾಣದ ಆಯ್ಕೆಯನ್ನು ಮೀಸಲಿಡಲು ಸಾಧ್ಯವಿಲ್ಲವೆ, ಇದರಿಂದ ಬಹಳಷ್ಟು ನರ್ಸ್‌ಗಳ ತೊಂದರೆ ನಿವಾರಣೆಯಾಗುವುದು ಸರಕಾರದ ಗಮನಕ್ಕೆ ಬಂದಿಲ್ಲವೆ?

ಈ) ಗಮನಕ್ಕೆ ಬಂದಿದ್ದಲ್ಲಿ ಸರಕಾರ ತೆಗೆದುಕೊಂಡ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಹೌದು.

ಆ) ಹೌದು.

ಇ) ಪರಿಶೀಲನೆಯಲ್ಲಿದೆ.

ಈ) ಪರಿಶೀಲಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ:- ದೇವಸ್ಥಾನಗಳಿಗೆ ರಿಯಾಯಿತಿ ದರದಲ್ಲಿ ಮರ ಮಂಜೂರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 154 (410)

ಶ್ರೀ ಯು.ಆರ್.ಸಭಾಪತಿ:- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990ರಿಂದ ಏಪ್ರಿಲ್ 1996ರವರೆಗೆ ರಾಜ್ಯದಲ್ಲಿ ಎಷ್ಟು ಪೂಜಾಮಂದಿರ ದೇವಸ್ಥಾನಗಳಿಗೆ ಬೇಕಾಗುವ ಮರಗಳನ್ನು ರಿಯಾಯಿತಿ ದರದಲ್ಲಿ ಮಂಜೂರು ಮಾಡಲಾಗಿದೆ (ವಿವರ ನೀಡುವುದು)